ಉಪಾಹಾರ ಮಾಡದೆ ಹೋದದ್ದಿಲ್ಲ. ಎತ್ತುಗಳಿಗೆ ನೀರೂ ಸಹ ಕುಡಿಸುತ್ತಿದ್ದಿರಿ' ಎಂದು ಮುಗುಳ್ನಕ್ಕರು.

ಹುಸೇನಿ ಉಪಾಹಾರದ ನಡುವೆ ಅದು ಇದು ಮಾತನಾಡುತ್ತಿದ್ದ. ತಪ್ಪಿಯೂ ತನ್ನ ಸ್ಥಿತಿಗತಿ ಹೇಳಲಿಲ್ಲ. ಆದರೆ ಕುಪ್ಪಣ್ಣಯ್ಯನಿಗೆ ಅದನ್ನು ಕೇಳುವ ಕುತೂಹಲ ಇತ್ತು. ಅವರಾಗಿಯೇ ಮಾತಿನ ನಡುವೆ 'ನಿಮಗೆ ಎಷ್ಟು ಮಕ್ಕಳು? ಹೆಂಡತಿ ಹೇಗಿದ್ದಾರೆ?' ಇತ್ಯಾದಿ ಪ್ರಶ್ನೆಗಳನ್ನು ಮುಂದಿಟ್ಟರು.

ಹುಸೇನಿ ಮೊದಲಿಗೆ ಏನೂ ಹೇಳಲಿಲ್ಲ. ಆಮೇಲೆ 'ನನಗೆ ಮಕ್ಕಳಿಲ್ಲ' ಎಂದು ಮೌನಿಯಾದ. ಕುಪ್ಪಣ್ಣಯ್ಯನಿಗೆ ಮುಂದೆ ಮಾತೆತ್ತಲು ಮನಸ್ಸಾಗಲಿಲ್ಲ. ಆದರೆ ಅವರ ಮುಖದಲ್ಲಿ ಇರುವ ನಿರಾಶೆಯನ್ನು ಗಮನಿಸಿದ ಹುಸೇನಿ 'ಸ್ವಾಮಿ, ನನಗೆ ಒಬ್ಬಳೇ ಹೆಂಡತಿ. ಕೆಲವರಿಗೆ ಎರಡು ಮಂದಿ ಇರುವುದೂ ಇದೆ. ನನ್ನ ಪತ್ನಿಯಲ್ಲಿ ಮಕ್ಕಳಾಗಲಿಲ್ಲ ಎಂದು ಅವಳೇ ನನ್ನನ್ನು ಇನ್ನೊಂದು ಮದುವೆಗೆ - ನನ್ನ ಯೌವನದ ದಿನಗಳಲ್ಲಿ - ಒತ್ತಾಯಿಸಿದ್ದಳು. ನಾನು 'ಇಲ್ಲ' ಎಂದು ಗದರಿ 'ಇಂಥ ಮಾತು ಮುಂದೆ ಎತ್ತಬೇಡ' ಎಂದಿದ್ದೆ. ಆದರೆ ದೇವರು ಇಂಥ ನನ್ನ ಪತ್ನಿಗೆ ಆರೋಗ್ಯದ ಸುಖ ಕೊಡಲಿಲ್ಲ. ನೋಡಿ ಈಗ ಆಕೆ ಕ್ಯಾನ್ಸರ್ ರೋಗಿ! ಒಂದು ವರುಷದಿಂದ ಚಿಕಿತ್ಸೆ ನಡೆಯುತ್ತಿದೆ. ಬದುಕುತ್ತಾಳೆ ಬದುಕುತ್ತಾಳೆ ಎಂದು ಡಾಕ್ಟ್ರು ಹೇಳುತ್ತಿದ್ದಾರೆ. ಅವಳೂ ಅದನ್ನು ನಂಬಿದ್ದಾಳೆ. ಆದರೆ ದಿನವೊಂದಕ್ಕೆ ನೂರಕ್ಕೂ ಮಿಕ್ಕಿ ರೂಪಾಯಿಗಳು ಔಷಧಕ್ಕೆ ಬೇಕಾಗುತ್ತದೆ. ಕರೆಂಟ್ ಚಿಕಿತ್ಸೆಗೆ (ರೇಡಿಯಂ ಟ್ರೀಟ್‌ಮೆಂಟ್) ಲಕ್ಷಕ್ಕೂ ಮಿಕ್ಕಿ ಖರ್ಚು ಮಾಡಿದೆ. ಇನ್ನು ನನ್ನದು ಎನ್ನುವುದು ಏನೂ ಇಲ್ಲ. ನನ್ನ ಬಂಧುಗಳು, ಸಮಾಜದ ಮುಖಂಡರು ನೀಡುವಷ್ಟು ನೀಡಿ ಆಗಿದೆ. ಪ್ರತಿ ದಿನದ ಖರ್ಚಿಗೆ ನಾನು ಗುಜರಿ ಎತ್ತಿದ್ದರಿಂದ ಬರುವ ಐದು ನೂರು ರೂಪಾಯಿ ಅಥವಾ ವಾರಕ್ಕೊಮ್ಮೆ ಈ ಕರಿಬೇವಿನ ಸೊಪ್ಪನ್ನು ಮಾರುವುದರಿಂದ ಬರುವ ಒಂದೋ ಒಂದೂವರೆ ಸಾವಿರ ರೂಪಾಯಿಯಿಂದ ಸುಧಾರಿಸಿಕೊಂಡು ಹೋಗುತ್ತಿದ್ದೇನೆ' ಎಂದವನೇ ಎರಡು ಕೈಗಳನ್ನು ಮುಂಚಾಚಿ 'ಅಲ್ಲಾಹುವನ್ನು ದಿನಾ ಬೇಡಿಕೊಳ್ಳುತ್ತಿದ್ದೇನೆ' ಎಂದು ಪ್ರಾರ್ಥನೆ ಮಾಡುವ ಹಾಗೆ ಮಾಡಿ 'ಅಲ್ಲಾಹು ಕೈ ಬಿಟ್ಟರೆ, ನಮ್ಮ ಅಪ್ಪನ ಕಾಲದ ಸೂರಿನ ಹಂಚು ತೆಗೆದು ಮಾರಬೇಕಾಗುತ್ತದೆ' ಎಂದ. ಆ ಮಾತನ್ನು ಆಡುವಾಗ ಅವನ ಕೊರಳು ಉಬ್ಬಿ ಬರುತ್ತಿತ್ತು.

ಕುಪ್ಪಣ್ಣಯ್ಯ ಕರಗಿ ಹೋದರು. ಅವರ ಕಣ್ಣುಗಳೂ ಹನಿಗೂಡಿದುವು. ಅವರು ಎದ್ದು ನಿಂತು ಹುಸೇನಿಯ ಬಳಿ ಸಾಗಿ 'ದೇವರು ಇದ್ದಾನೋ ಇಲ್ಲವೋ ಎನ್ನುವುದು ನನಗೆ ಗೊತ್ತಿಲ್ಲ. ಆದರೆ ನೀವು ದೇವರು ಇದ್ದಾನೆ ಎಂದು ಖಂಡಿತ ನಂಬುವವರು. ಆ ನಂಬಿಕೆಯೇ ನಿಮ್ಮನ್ನು ದೇವರಾಗಿ ಕಾಪಾಡುತ್ತದೆ' ಎಂದು ಅವನನ್ನು ಬಿಗಿದಪ್ಪಿ ತನ್ನ ಕಿಸೆಯಲ್ಲಿದ್ದ ಎರಡು ಐದುನೂರರ ನೋಟನ್ನು ತೆಗೆದು ಮುದ್ದೆ ಮಾಡಿ ಅವನ ಅಂಗೈಯಲ್ಲಿಟ್ಟು ಆ ಅಂಗೈಯನ್ನು ಅಮುಕಿದರು.

ಹುಸೇನಿ ನಿಧಾನವಾಗಿ ಮತ್ತೆ ಬೆಂಚಿಯಲ್ಲಿ ಕುಳಿತ. ಕಣ್ಣುಗಳನ್ನು ಒರಸುತ್ತಾ ಅಂಗೈ ಬಿಡಿಸಿ ಕೈಯಲ್ಲಿದ್ದ ಎರಡು ಐದು ನೂರರ ನೋಟುಗಳನ್ನು ನೋಡಿ, ಆಗಲೇ ಗಲ್ಲಾಪೆಟ್ಟಿಗೆಯ ಹಿಂದೆ ಹೋಗಿ ಕುಳಿತಿದ್ದ ಕುಪ್ಪಣ್ಣಯ್ಯನ ಇದಿರು ನಿಂತು, 'ನನಗೆ ಮಾಂಕು ಹೇಳಿದ, ನಿಮ್ಮಲ್ಲಿ ಕರಿಬೇವಿನ ಮರಗಳಿವೆಯಂತಲ್ಲ. ನೀವು ಕೊಟ್ಟರೆ ಕೆಲವು ವಾರ ಎರಡೆರಡು ಗೋಣಿ ಚೀಲದಲ್ಲಿ ಹಾಕಿ ಈ ಸೈಕಲಿನಲ್ಲಿ ಕಾರ್ಕಳಕ್ಕೆ ಕೊಂಡು ಹೋಗಬಹುದು ಎಂದುಕೊಂಡು ಬಂದೆ' ಎಂದ.

'ಓ ಅದಾ? ನೀವು ತಾನು ಹುಸೇನಿ ಅಂದಾಗಲೇ– ಅದಕ್ಕೇ ನೀವು ಬಂದವರು ಎಂದುಕೊಂಡಿದ್ದೆ ನಾನು. ಒಳ್ಳೇದು. ನೀವು ಯಾವಾಗ ಬೇಕೋ ಆವಾಗ ಬಂದು ಆ ಮೂರೂ ಮರಗಳ ಸೊಪ್ಪುಗಳನ್ನು ಕೊಂಡು ಹೋಗಬಹುದು' ಎಂದರು.

ಹುಸೇನಿ ಸಂತುಷ್ಟನಾದ. 'ಸ್ವಾಮಿ ನಿಮ್ಮ ಅನುಮತಿ ನನಗೆ ದೇವರು ಕೊಟ್ಟ ವರ ಎಂದುಕೊಂಡಿದ್ದೇನೆ. ಅದರಿಂದ ಕನಿಷ್ಠ ನಾಲ್ಕೈದು ಸಾವಿರ ರೂಪಾಯಿಗಳು ಬರಬಹುದೋ ಏನೋ? ಅಷ್ಟು ಬಂದರೆ ನನ್ನ ಹೆಂಡತಿಯ ಒಂದು ತಿಂಗಳ ಚಿಕಿತ್ಸೆಗೆ ಅದು ಉಪಯೋಗ ಅಗುತ್ತದೆ.' ಎಂದವನೇ, 'ಸ್ವಾಮಿ, ಕ್ಷಮಿಸಬೇಕು ನೀವು ನಿಮ್ಮ 'ಸೊತ್ತಿಗೆ' (ವಸ್ತುವಿಗೆ) ಎಷ್ಟು ಕೊಡಬೇಕು ಎಂದು ಹೇಳಿ? 'ದಾಕ್ಷಿಣ್ಯ ಬೇಡ, ವ್ಯವಹಾರ ಅಂದರೆ ವ್ಯವಹಾರ' ಎಂದ.

ಕುಪ್ಪಣ್ಣಯ್ಯ 'ನಾನು ನಿನ್ನ ಇಷ್ಟದಂತೆ ಕೊಡು ಎಂದು ಹೇಳುವುದೇ ಆಗಿದ್ದರೆ ನಿನಗೆ ಈಗ ಸಾವಿರ ರೂಪಾಯಿ ಕೊಡುತ್ತಿದ್ದೇನೆಯೇ ಹುಸೇನಿ?' ಎಂದು ಪ್ರಶ್ನಿಸಿ 'ಒಂದು